ಶ್ರೀ ಅರಗ ಜ್ಞಾನೇಂದ್ರ:- ಬಹಳ ಶಕ್ತಿಶಾಲಿ ಮಾಡುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾಡುತ್ತಿದ್ದೀರಿ. ನಮಗೆ ಈಗ ಗೊತ್ತಾಗುತ್ತಿದೆಯಲ್ಲಾ. ನಿಮ್ಮ ಕೈಗೇನು ಸಣ್ಣ ಸರ್ಕಾರವನ್ನು ಕೊಟ್ಟಿದ್ದೇವೆಯೇ? ಕೇಂದ್ರ ಸರ್ಕಾರವನ್ನೂ ಕೊಟ್ಟಿದ್ದೇವೆ.

ಶ್ರೀ ಡಿ.ವಿ ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕೇಳುವಂಥದ್ದು ಈಗ ಮಂತ್ರಿಗಳಿಗೆ ಕಾಳಜಿ ಇಲ್ಲ. ಮತ್ತೊಂದು ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ನಾನು ಹೇಳುವಂಥದ್ದು ಏನೆಂದರೆ ಪರಿಸರದ ಬಗ್ಗೆ ಇವತ್ತು ನೂರಾರು ಸಂಘಟನೆಗಳು ಇವೆ. ಕೆಲವು ಸ್ವಾರ್ಥಕ್ಕೆ ಇರಬಹುದು; ಮತ್ತೊಂದಕ್ಕೆ ಇರಬಹುದು; ಇಲ್ಲವೆಂದು ನಾನು ಹೇಳುವುದಿಲ್ಲ. ಹಲವಾರು ಸಂಘಟನೆಗಳು ಬೇರೆ ಬೇರೆ ರೀತಿಯಲ್ಲಿ ವಿದೇಶಿ ಮೂಲಗಳಿಂದ ಬೇರೆ ಬೇರೆ ವ್ಯವಸ್ಥೆಗಳನ್ನು ಪಡೆದುಕೊಂಡೂ ಕೂಡ ಏನಾದರೂ ಮಾಡುವಂಥ ಪರಿಸರ ಸಂಘಟನೆಗಳಿರಬಹುದು. ಆದರೆ ವಸ್ತುನಿಷ್ಠ ವಿಚಾರವನ್ನು ತಿಳಿದುಕೊಳ್ಳುವಂಥ ಸಂದರ್ಭಗಳು, ವಿಶೇಷವಾಗಿ ಹಲವಾರು ವರದಿಗಳು ಈ ರೀತಿ ಬಂದಾಗ ನಾನು ಸರ್ಕಾರವನ್ನು ಆಗ್ರಹಪಡಿಸುವುದು ಇಷ್ಟೆ. ಪತ್ರಿಕೆಗಳಲ್ಲಿ ಇಂಥ ವರದಿಗಳೆಲ್ಲಾ ಬಿಡುಗಡೆಯಾಗಿದೆ ಎಂದು ಯಾವುದಾದರೂ ತಮ್ಮ ಗಮನಕ್ಕೆ ಬಂದಾಗ, ದಯವಿಟ್ಟು ತಮ್ಮ ಅಧಿಕಾರಿಗಳಲ್ಲಿ ಸೂಕ್ಷ್ಮವಾದಂಥ ವಿಚಾರ ಇದು. ಪರಿಸರ ಸಂರಕ್ಷಣೆ ಎಂದರೆ ಅತ್ಯಂತ ಸೂಕ್ಷ್ಮವೆಂದು ತಾವೇ ಒಪ್ಪಿಕೊಂಡಿದ್ದೀರಿ; ಮತ್ತು ಇದು ಆಗಬೇಕೆನ್ನುವ ಮುತುವರ್ಜಿಯನ್ನು ಕೂಡ ವಹಿಸಿದ್ದೀರಿ. ಇಲ್ಲ ಎಂದು ನಾನು ಖಂಡಿತಾ ಹೇಳುತ್ತಿಲ್ಲ. ಆದರೆ ಇಂಥ ಸಂದರ್ಭಗಳಲ್ಲಿ ಈಗಾಗಲೇ ವೃಕ್ಷಲಕ್ಷ ಆಂದೋಲನ ಎಂಬ ಸಮಿತಿ, ಮಾನ್ಯ ಅನಂತ ಹೆಗಡೆಯವರ ನೇತೃತ್ವದಲ್ಲಿ ವ್ಯಾಪಕವಾದಂಥ ಒಂದು ಪರಿಸರದ ವಿಚಾರವನ್ನು ಈಗಾಗಲೇ ಹಮ್ಮಿಕೊಂಡಿದೆ ಎಂದು ಹೇಳಿ ಎಲ್ಲಾ ಕಡೆ ನಾವು ಕೇಳಿದ್ದೇವೆ. ದಯವಿಟ್ಟು ಸರ್ಕಾರ ಈ ವೃಕ್ಷಲಕ್ಷ ಆಂದೋಲನದ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಬೇಕೆನ್ನುವ ಒಂದು ವಿನಂತಿಯನ್ನು ಸರ್ಕಾರಕ್ಕೆ ಮಾಡುವಂಥ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ನಾನು ಹೇಳಿದೆ, ಸರ್ಕಾರದ ಗಮನಕ್ಕೆ ಇಂಥ ವಿಚಾರಗಳು ಬೇಕು. ಅದಕ್ಕಾಗಿ ಪತ್ರಿಕೆಯಲ್ಲಿ ಬಂದದ್ದನ್ನು ಎಲ್ಲಾ ನಾವು ನೋಡಲೇಬೇಕಾಗುತ್ತದೆ, ನೋಡಿದರೆ ಬಹಳ ಒಳ್ಳೆಯದಾಗುತ್ತದೆ. ಆಡಳಿತಕ್ಕೆ ಹೆಚ್ಚು ಸಹಾಯ ಕೂಡ ಆಗುತ್ತದೆ ಎನ್ನತಕ್ಕ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

ಮೈಸೂರು ಜಿಲ್ಲೆಯಲ್ಲಿರುವ ಕೈಗಾರಿಕೆಗಳಲ್ಲಿ ಲಾಕ್‌ಔಟ್ ಘೋಷಣೆ

184 (1944) ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರ್ಮಿಕ ಇಲಾಖೆಯ ಅನುಮತಿ ಪಡೆಯದೇ 11.10.99ರ ನಂತರ ಮೈಸೂರು ಜಿಲ್ಲೆಯಲ್ಲಿ ಎಷ್ಟು ಕೈಗಾರಿಕೆಗಳು ಅನಧಿಕೃತವಾಗಿ ಲಾಕ್ ಔಟ್ ಘೋಷಿಸಿವೆ?

ಆ) ಎಷ್ಟು ಪ್ರಕರಣಗಳಲ್ಲಿ ಕೈಗಾರಿಕೆ ಪುನರ್ ಆರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಎಷ್ಟು ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದೆ; ವಸೂಲು ಮಾಡಿದ ಹಣ ಎಷ್ಟು?

ಈ) ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಹಾಗೂ ಅನಧಿಕೃತ ಲಾಕ್ ಔಟ್ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮ ಏನು?

ಶ್ರೀ ಖಮರುಲ್ ಇಸ್ಲಾಂ(ಕಾರ್ಮಿಕ ಸಚಿವರು):

ಅ) 5(ಐದು)

ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಎಲ್ಲಾ ಪ್ರಕರಣಗಳಲ್ಲಿ ಕೈಗಾರಿಕೆ ಪುನರ್ ಪ್ರಾರಂಭಿಸಲು ಕೈಗಾರಿಕಾ ವಿವಾದಗಳ ಕಾಯ್ದೆಯನ್ವಯ ಕ್ರಮ ತೆಗೆದುಕೊಳ್ಳಲಾಗಿದೆ, ಒಂದು ಕೈಗಾರಿಕೆ ಪುನರಾರಂಭಗೊಂಡಿದೆ.

ಇ) ಯಾವುದೇ ಪ್ರಕರಣದಲ್ಲಿ ದಂಡ ವಿಧಿಸಲಾಗಿರುವುದಿಲ್ಲ.

ಈ) ಅನಧಿಕೃತ ಬೀಗಮುದ್ರೆ ಘೋಷಿಸಿರುವ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಕೈಗಾರಿಕಾ ವಿವಾದ ಕಾಯ್ದೆಯಡಿ, ಕಾರ್ಮಿಕ ಇಲಾಖೆಯು ಸಂಧಾನ ಸಭೆಗಳನ್ನು ನಡೆಸಿ, ವಿವಾದವನ್ನು ಬಗೆಹರಿಸಲು ಕ್ರಮ ತೆಗೆದುಕೊಂಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ದಿನಾಂಕ: 11-10-1999ರಿಂದ ಮೈಸೂರು ಜಿಲ್ಲೆಯಲ್ಲಿ ಅನಧಿಕೃತವಾಗಿ ಲಾಕ್ ಔಟ್ ಮಾಡಿದ ಕೈಗಾರಿಕೆಗಳ ಪಟ್ಟಿ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು ಮತ್ತು ವಿಳಾಸ	ಲಾಕ್ ಔಟ್ ಘೋಷಿಸಿದ ದಿನಾಂಕ	ಇದ್ದ ಕಾರ್ಮಿಕರ ಸಂಖ್ಯೆ	ಲಾಕ್ ಔಟ್ ಮುಂದುವರೆದ ದಿನಾಂಕ ಅಥವಾ ಮುಕ್ತಾಯಗೊಂಡ ದಿನಾಂಕ	ತೆಗೆದುಕೊಂಡಿರುವ ಕ್ರಮ	ಷರಾ
1	2	3	4	5	6	7
1)	ವಿಷ್ಣು ಫೋರ್ಜ್, ಮೈಸೂರು	16-03-2001	91	4-5-2001ಕ್ಕೆ ಮುಕ್ತಾಯಗೊಂಡಿದೆ	4-5-2001ರಲ್ಲಿ ಸಂಧಾನ ಸಭೆಯನ್ನು ನಡೆಸಿ ಒಪ್ಪಂದದಲ್ಲಿ ಮುಕ್ತಾಯ ಗೊಳಿಸಲಾಗಿದೆ	ಕಾರ್ಮಿಕರಿಗೆ 61.7 ಲಕ್ಷ ಗಳ ಪರಿಹಾರವನ್ನು ಪಾವತಿಸಲಾಗಿದೆ.
2)	ಮೆ:ಪ್ಲೂಜ ಅಂಬ್ರೆಲಾ ಪ್ರೈ.ಲಿ., ಮೈಸೂರು	17-09-2001	113	ಲಾಕ್ ಔಟ್ ಮುಂದುವರೆದಿದೆ	ವಿವಾದವನ್ನು ಸಂಧಾನಕ್ಕೆ ತೆಗೆದುಕೊಂಡು ಸಂಧಾನ ವಿಫಲಗೊಂಡ ಕಾರಣ ವಿವಾದವನ್ನು ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.	ಬೀಗಮುದ್ರೆಯನ್ನು ನಿಷೇಧಿಸಿ ಸರ್ಕಾರವು ಆದೇಶವನ್ನು ಹೊರಡಿಸಿರುತ್ತದೆ.
3)	ಮೈಸೂರು ಪ್ರಿಸಿಷಾನ್, ಇಂಜಿನಿಯರಿಂಗ್, ಯಾದವಗಿರಿ, ಮೈಸೂರು	24-05-2001	9	28-7-2001ಕ್ಕೆ ಮುಕ್ತಾಯಗೊಂಡಿದೆ	ಸಂಧಾನದ ಮೂಲಕ ವಿವಾದವನ್ನು ಇತ್ಯರ್ಥ ಗೊಳಿಸಿದ್ದು ಕಾರ್ಮಿಕರಿಗೆ ರೂ. 3,69,371-00ಗಳ ಪರಿಹಾರವನ್ನು ಪಾವತಿ ಮಾಡಲಾಗಿರುತ್ತದೆ.	ಕಾರ್ಖಾನೆಯು ದಿನಾಂಕ: 1-12-2002ರಿಂದ ಪುನರಾರಂಭಗೊಂಡಿದೆ

1	2	3	4	5	6	7
4)	ಮೈಸೂರು ಪ್ಯಾನಲ್ ಅಂಡ್ ಬೋರ್ಡ್, ಪಾಂಡವಪುರ, ಮೈಸೂರು	30-10-2001	101	ಲಾಕ್ ಔಟ್ ಮುಂದುವರೆದಿದೆ	ವಿವಾದವನ್ನು ಸಂಧಾನಕ್ಕೆ ತೆಗೆದುಕೊಂಡು ವಿಫಲಗೊಂಡ ಪರಿಣಾಮವಾಗಿ ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.	
5)	ಕರೀಂ ಸಿಲ್ಕ್ ಇಂಟರ್ ನ್ಯಾಷನಲ್ ಲಿ., ನಂಜನಗೂಡು	25-01-2002	166	29-1-2003	ವಿವಾದವನ್ನು ಸಂಧಾನಕ್ಕೆ ತೆಗೆದುಕೊಂಡು ವಿಫಲಗೊಂಡ ಪರಿಣಾಮವಾಗಿ ಕಾರ್ಮಿಕ ನ್ಯಾಯಾಲಯಕ್ಕೆ ನ್ಯಾಯ ನಿರ್ಣಯಕ್ಕಾಗಿ ಒಪ್ಪಿಸಲಾಗಿದೆ.	ಅಲ್ಲದೇ ಲಾಕ್‌ಔಟ್‌ನ್ನು ನಿಷೇಧಿಸಿ ಸರ್ಕಾರವು ಆದೇಶವನ್ನು ಹೊರಡಿಸಿರುತ್ತದೆ.

ಶ್ರೀ ಎ.ಎಸ್. ಗುರುಸ್ವಾಮಿ:– ಮಾನ್ಯ ಅಧ್ಯಕ್ಷರೇ, ಏನು ನನಗೆ ಉತ್ತರ ಕೊಟ್ಟಿದ್ದಾರೆ, ಇದು ಅಷ್ಟಾಗಿ ಪೂರ್ಣವಾಗಿ ಬಂದಿಲ್ಲವೆಂದು ಹೇಳಿ ನನಗನ್ನಿಸುತ್ತದೆ. ಏಕೆಂದರೆ ಐದು ಫ್ಯಾಕ್ಟರಿಗಳು ಲಾಕ್‌ಔಟ್ ಆಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅವು ಯಾವುವು ಎಂದು ತಿಳಿಸಿಲ್ಲ. ಹೆಸರುಗಳನ್ನು ಹೇಳಬಹುದಾಗಿತ್ತು. ಅದನ್ನು ಹೇಳಿಲ್ಲ.

ಅಧ್ಯಕ್ಷರು:– ಐದು ಫ್ಯಾಕ್ಟರಿಗಳು ಯಾವುದು ಎಂದು ಉತ್ತರದಲ್ಲಿ ಇದೆ ನೋಡಿ.

ಶ್ರೀ ಎ.ಎಸ್. ಗುರುಸ್ವಾಮಿ:– ಕೊನೆಯಲ್ಲಿ ಬಂದಿದೆ. ನೋಡಿದ್ದೇನೆ. ಏನು ಸ್ಟಾ ಟಿಸ್ಟಿಕ್ಸ್‌ನ್ನು ಮಾನ್ಯ ಮಂತ್ರಿಯವರು ಕೊಟ್ಟಿದ್ದಾರೆ, ಇದು ಅನ್‌ಡಿವೈಡೆಡ್ ಮೈಸೂರು ಡಿಸ್ಟ್ರಿಕ್ಟ್‌ನ ಮಾಹಿತಿಯೇ ಅಥವಾ ಚಾಮರಾಜನಗರ ನಾವು ಬೇರೆ ಬೇರೆಯಾದ ಮೇಲೆ ಆದಂಥ ಮಾಹಿತಿಯೇ ಎನ್ನತಕ್ಕಂಥ ಒಂದು ಪ್ರಶ್ನೆಯನ್ನು ಅವರು ವಿಷದವಾಗಿ ಹೇಳಬೇಕಾಗುತ್ತದೆ. ಮತ್ತೆ ಬಹಳಷ್ಟು ಪ್ರಕರಣಗಳಲ್ಲಿ ಅವರು ಕನ್‌ಸಿಲಿಯೇಷನ್‌ಗೆ ಕಳುಹಿಸದೇ ಇರುವ ಪ್ರಕರಣಗಳು ಅವರ ಗಮನಕ್ಕೆ ಬಂದಿವೆಯೇ ಎನ್ನುವುದು ಮತ್ತೊಂದು ಪ್ರಶ್ನೆ. ಇನ್ನು ನನಗೆ ಗೊತ್ತಿರುವ ಹಾಗೆ ನಾಲ್ಕೈದು ಪ್ರಕರಣಗಳನ್ನು ಕನ್‌ಸಿಲಿಯೇಷನ್‌ಗೆ ಅವರು ರೆಫರ್ ಮಾಡದೇ ಇರತಕ್ಕಂಥದ್ದು ನನ್ನ ಗಮನಕ್ಕೆ ಬಂದಿರುವ ವಿಚಾರ. ಇದಲ್ಲದೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಕೋರ್ಟ್‌ನಲ್ಲಿ ಆಸ್ ಆನ್ ಟುಡೇ ಈಗ ಎಷ್ಟು ಪ್ರಕರಣಗಳು ಇವತ್ತಿಗೆ ಉಳಿದಿವೆ ಎನ್ನುವುದನ್ನು ಸಭೆಯ ಗಮನಕ್ಕೆ ತರಬೇಕೆನ್ನುವ ವಿಚಾರ. ಮತ್ತೆ ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಜೇಷನ್‌ನವರು ಇತ್ತೀಚೆಗೆ ವರ್ಲ್ಡ್‌ವೈಡ್ ಈ ಲಾಕ್ ಔಟ್ ಬಗ್ಗೆ ಒಂದು ಹೊಸ ನೀತಿಯನ್ನು, ಅವರದೇ ಆದಂಥ ಗೈಡ್‌ಲೈನ್ಸ್‌ನ್ನು ಇಡೀ ಪ್ರಪಂಚಾದ್ಯಂಥ ವಿಚಾರವನ್ನು ತಿಳಿಸಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ದಯಮಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಸಿ.ಆರ್ ಸಗೀರ್ ಅಹಮದ್(ವಸತಿ ಸಚಿವರು) ಕಾರ್ಮಿಕ ಸಚಿವರ ಪರವಾಗಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನೀಡಿರುವಂಥ ಮಾಹಿತಿ ಪ್ರಕಾರ 5 ಕೈಗಾರಿಕೆಗಳು ಲಾಕ್‌ಔಟ್ ಆಗಿರುವಂಥದ್ದು. ಇದು ಮೈಸೂರು ಜಿಲ್ಲೆ ವ್ಯಾಪ್ತಿಗೆ ಬರುವಂಥದ್ದು. ಡಿವೈಡೆಡ್‌ಅಲ್ಲ, ಅನ್‌ಡಿವೈಡೆಡ್ದೂ ಅಲ್ಲ. ಮೈಸೂರು ಜಿಲ್ಲೆಯಲ್ಲಿ ಐದು ಕಾರ್ಖಾನೆಗಳು ಲಾಕ್ ಔಟ್‌ಆಗಿವೆ. ಅದರ ಹೆಸರುಗಳನ್ನು ಅನುಬಂಧ-1ರಲ್ಲಿ ಕೊಟ್ಟಿದ್ದೇವೆ. ಐದು ಕಾರ್ಖಾನೆಗಳಲ್ಲಿ ವಿಷ್ಣು ಫೋರ್ಜ್ ಎಂದು ಹೇಳಿ ಒಂದು ಕಂಪನಿ ಲಾಕ್ ಔಟಾಗಿತ್ತು. ಅದು ಇಲಾಖೆಯ ಮತ್ತು ಕಾರ್ಮಿಕರ ಮಧ್ಯಸ್ಥಿಕೆಯಿಂದ ಮಾತುಕತೆ ಮೂಲಕ ಬಗೆಹರಿಸುವುದರ ಮುಖಾಂತರ ಅಲ್ಲಿ ಕಾರ್ಮಿಕರಿಗೆ ನೀಡಬೇಕಾದ ಅರವತ್ತೊಂದು ಲಕ್ಷದ ಏಳು ಸಾವಿರ ರೂಪಾಯಿಗಳನ್ನು ನಾವು ಪಾವತಿ ಮಾಡಿದ್ದೇವೆ. ಆ ಕಾರ್ಖಾನೆ ಚಾಲೂ ಆಗಿದೆ. ಉಳಿದ ಕಾರ್ಖಾನೆಗಳಿಗೆ ನಾವು ಮಾತುಕತೆ ಮೂಲಕ ಬಗೆಹರಿಸುವಂಥ ಕಾರ್ಮಿಕರು, ಆ ಕಾರ್ಖಾನೆಯ ಮಾಲೀಕರು ಹಾಗೂ ಇಲಾಖೆಯ ಅಧಿಕಾರಿಗಳು ಪ್ರಯತ್ನ ಮಾಡಿರುವಂಥ ಸಂದರ್ಭದಲ್ಲಿ ಕೆಲವರು ಒಪ್ಪಂದಕ್ಕೆ ಬರಲಿಲ್ಲ. ಒಪ್ಪಂದಕ್ಕೆ ಬರದೇ ಇರುವ ಕಾರಣ ಸರ್ಕಾರ ನೇರವಾಗಿ ಒಂದು ಆದೇಶವನ್ನು ಹೊರಡಿಸಿತು. ಕಾರ್ಮಿಕರಿಗೆ ಕೆಲಸ ನೀಡುವ ಮುಖಾಂತರ ತಕ್ಷಣವೇ ತಮ್ಮ ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿ ಸರ್ಕಾರದ ಆದೇಶವನ್ನು ಧಿಕ್ಕರಿಸಿದ್ದಾರೆ. ಆದುದರಿಂದ ನ್ಯಾಯಾಲಯಕ್ಕೆ ಹೋಗುವಂತೆ ಆಗಲೇ ಕಾರ್ಮಿಕರ ಸಂಘಟನೆ ಹಾಗೂ ಕಾರ್ಮಿಕರಿಗೆ ಸೂಚನೆ ನೀಡುವ ಮುಖಾಂತರ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಿದ್ದೇವೆ. ಒಂದು ಪಕ್ಷ ನ್ಯಾಯಾಲಯದ ತೀರ್ಪಿಗಾಗಿ ಒಪ್ಪದೇ ಹೋದರೆ

ಸರ್ಕಾರವೇ ನೇರವಾಗಿ ಪ್ರವೇಶಿಸುತ್ತದೆ ಹಾಗೂ ಈ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡುವುದರ ಜೊತೆಗೆ ಈ ಕಾರ್ಖಾನೆಗಳಲ್ಲಿ ಅವರಿಗೆ ಉದ್ಯೋಗವನ್ನು ಒದಗಿಸಿಕೊಡುವ ಪ್ರಯತ್ನವನ್ನು ಮಾಡುತ್ತದೆ ಎಂದು ಹೇಳಿ ಮಾನ್ಯ ಸಭಾಧ್ಯಕ್ಷರ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೇ, ಕರೀಂ ಸಿಲ್ಕ್ ಸೆಂಟರ್ ಎಂದು ಹೇಳಿ ನಂಜನಗೂಡಿನಲ್ಲಿ ಒಂದು ಸಿಲ್ಕ್ ಫ್ಯಾಕ್ಟರಿ ಇದೆ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿಲ್ಕ್ ತಯಾರು ಮಾಡತಕ್ಕ ಒಂದು ಫ್ಯಾಕ್ಟರಿ ವಿನಾಕಾರಣ ಲೇಬರ್ ಸಮಸ್ಯೆ ಬಂದಾಗ ಕಾರ್ಮಿಕ ಇಲಾಖೆಯವರು ಸಕಾಲದಲ್ಲಿ ಇಂಟರ್‌ಫಿಯರ್ ಆಗದೇ ಅವರಿಗೆ ಡಿಲೇ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇತ್ತೀಚೆಗೆ ಅದನ್ನು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಕೋರ್ಟಿಗೆ ರೆಫರ್ ಮಾಡಿದ್ದಾರೆ. ಡಿಸ್‌ಪ್ಯೂಟ್‌ನ್ನು ತೀರ್ಮಾನ ಮಾಡುವುದರ ಬಗ್ಗೆ ಬಹಳ ಸಲ ಅವರನ್ನು ಎಳೆದಾಡಿದ್ದಾರೆ. ಈ ತಾರತಮ್ಯವನ್ನು ಏಕೆ ತೋರಿಸುತ್ತೀರಿ? ಫಾರಿನ್ ಎಕ್ಸ್‌ಛೇಂಜ್ ಅರ್ನ್ ಮಾಡತಕ್ಕ ಒಂದು ಫ್ಯಾಕ್ಟರಿ ಅದು. ಅದಕ್ಕೆ ಲೇಬರ್ ಡಿಪಾರ್ಟ್‌ಮೆಂಟಿನಿಂದ ಅಷ್ಟಾಗಿ ಸಹಕಾರ ಸಿಗುತ್ತಿಲ್ಲವೆನ್ನುವ ಕೊರಗನ್ನು ನಾನು ಕಾರ್ಮಿಕರ ಮುಖಾಂತರ, ಅವರು ತೀರ್ಮಾನಕ್ಕೆ ಬರುತ್ತೇನೆಂದರೂ ಸಹ ಸ್ವಲ್ಪ ತಾಳ್ರಿ, ತೀರ್ಮಾನ ಮಾಡುತ್ತೇವೆ ತಾಳ್ರಿ ಎಂದು ಹೇಳಿ ಇಲಾಖೆಯವರೇ ಹೇಳಿರುವ ಮಾತನ್ನು ನಾನು ಕೇಳಿದ್ದೇನೆ. ಎರಡನೆಯದು, ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಜೇಷನ್ (ಐ.ಎಲ್.ಓ) ರವರು ಹೊಸದಾಗಿ ಗೈಡ್‌ಲೈನ್ಸ್‌ನ್ನು ಎಲ್ಲಾ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ಸರ್ಕಾರಗಳೂ ಕೂಡ ಈ ಲಾಕ್‌ಔಟ್‌ಗಳನ್ನು ಬಗೆಹರಿಸುವುದಕ್ಕೆ ವಿಧಿವಿಧಾನಗಳನ್ನು, ಒಂದು ಮಾಡೆಲ್ ಕೋಡ್‌ನ್ನು ಅವರು ಕಳುಹಿಸಿಕೊಟ್ಟಿದ್ದಾರೆ. ಅದೇನು ಎನ್ನುವ ವಿಚಾರವನ್ನು ಮಾನ್ಯ ಸಚಿವರು ಸಭೆಗೆ ತಿಳಿಸಬೇಕೆಂದು ಹೇಳಿ ತಮ್ಮ ಮುಖಾಂತರ ಕೋರುತ್ತೇನೆ.

ಶ್ರೀ ಸಿ.ಆರ್ ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಕರೀಂ ಸಿಲ್ಕ ಸೆಂಟರ್ ಎಂದು ಹೇಳಿ ಏನು ನಂಜನಗೂಡಿನಲ್ಲಿ ಇದೆ, ಇದರ ಇತ್ಯರ್ಥಕ್ಕೆ, ಸಂಧಾನಕ್ಕೆ ಕಾರ್ಮಿಕರನ್ನು, ಆ ಮಾಲೀಕರನ್ನು ಹತ್ತಾರು ಬಾರಿ ಕರೆದು ಸಮಸ್ಯೆ ಬಗೆಹರಿಸತಕ್ಕ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಆದರೆ ಆ ಸಂದರ್ಭದಲ್ಲಿ ಏನಾಯಿತು ಎಂದು ಹೇಳಿದರೆ ಅವರು ಒಪ್ಪಂದಕ್ಕೆ ಬರಲಿಲ್ಲ. ಒಪ್ಪಂದಕ್ಕೆ ಬರದೇ ಇರುವ ಕಾರಣ ಸರ್ಕಾರ ನೇರವಾಗಿ ಒಂದು ಆದೇಶವನ್ನು ಹೊರಡಿಸುವುದರ ಮುಖಾಂತರ ಕಾರ್ಖಾನೆ ಪುನಃ ಪ್ರಾರಂಭವಾಗಬೇಕು, ಕಾರ್ಮಿಕರ ಹಿತವನ್ನು ಕಾಪಾಡುವುದರ ಜೊತೆಗೆ ಕಾರ್ಮಿಕರಿಗೆ ನೌಕರಿಯನ್ನು ತಕ್ಷಣವೇ ಒದಗಿಸಿಕೊಡಬೇಕೆಂದು ಹೇಳಿ ಸರ್ಕಾರ ನಿರ್ದಿಷ್ಟವಾಗಿ ಒಂದು ಆದೇಶವನ್ನು ಹೊರಡಿಸಿದೆ. ಆ ಆದೇಶವನ್ನು ಸಹ ಈ ಕಾರ್ಖಾನೆಯವರು ಧಿಕ್ಕರಿಸಿದ್ದಾರೆ. ಆದುದರಿಂದ ಇನ್ನು ಮುಂದೆ ಮಾನ್ಯ ಶಾಸಕರು ಕೋರಿರುವಂತೆ ಕಾರ್ಮಿಕರಿಗೆ ನ್ಯಾಯವನ್ನು ಒದಗಿಸಿಕೊಡುವಂಥದ್ದು ನಮ್ಮ ಜವಾಬ್ದಾರಿ. ಕಾರ್ಮಿಕರಿಗೆ ಯಾವುದೇ ತರಹದಲ್ಲಿ ಅನ್ಯಾಯವಾಗದಂತೆ ನೋಡುವಂಥದ್ದು ಸರ್ಕಾರದ ಇಲಾಖೆಯ ಜವಾಬ್ದಾರಿ. ಆದುದರಿಂದ ಏನಾದರೂ ಇವರು ತಕ್ಷಣವೇ ಸರ್ಕಾರ ಹೊರಡಿಸಿರುವ ಆದೇಶಕ್ಕೆ ಮಾನ್ಯತೆ ನೀಡದಿದ್ದಲ್ಲಿ ಪ್ರಾಯಶಃ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದರ ಮುಖಾಂತರ ತಕ್ಷಣವೇ ಆ ಕಾರ್ಮಿಕರಿಗೆ ಪರಿಹಾರವನ್ನು ಒದಗಿಸಿಕೊಡುವುದಕ್ಕೆ ನಾವು ತೀರ್ಮಾನವನ್ನು ಮಾಡುತ್ತೇವೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೇ, ಐಎಲ್ಓ ಅವರು ಗೈಡ್‌ಲೈನ್ಸ್ ಕೊಟ್ಟಿರುವ ಬಗ್ಗೆ ತಮಗೊಂದು ಪ್ರಶ್ನೆ ಹಾಕಿದ್ದೆ. ದಯಮಾಡಿ ಅದರ ಬಗ್ಗೆ ಸಭೆಗೆ ತಿಳಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೇ, ಪ್ರಮುಖವಾಗಿ ಎರಡು ವಿಧಗಳು ಇವೆ. ಒಂದು ಅನಧಿಕೃತವಾಗಿ ಕಾರ್ಖಾನೆಯನ್ನು ಮುಚ್ಚಿ ಅಲ್ಲಿರುವಂತಹ ಕಾರ್ಮಿಕರುಗಳಿಗೆ ಸಿಗಬೇಕಾದಂತಹ ಸವಲತ್ತುಗಳೂ ಸಿಗದ ರೀತಿಯಲ್ಲಿ ಹೊರಗಿಡುವಂತಹದು ಒಂದು ಭಾಗವಾದರೆ, ಇನ್ನೊಂದು ಅಧಿಕೃತವಾಗಿ ನಾವು ಕಾರ್ಖಾನೆಗಳನ್ನು ಮುಚ್ಚಿದ್ದೇವೆಂದು ಹೇಳಿದಂತಹದರಲ್ಲಿ ಕೂಡ ವಿಶೇಷವಾಗಿ ಮೈಸೂರಿನಲ್ಲಿ ಸುಮಾರು 23 ಮೇಜರ್ ಇಂಡಸ್ಟ್ರೀಗಳು ಮುಚ್ಚಿವೆ. ದೊಡ್ಡ ದೊಡ್ಡ ಇಂಡಸ್ಟ್ರಿಗಳಾದ ಮಹೇಂದ್ರ ಅಂಡ್ ಮಹೇಂದ್ರದಿಂದ ಹಿಡಿದು ಅಲ್ಲಿರುವಂತಹ ಜೇ ಬೇರಿಂಗ್, ಬಾಲ್ ಬೇರಿಂಗ್ ಇಂತಹ ಕಾರ್ಖಾನೆಗಳಲ್ಲೂ ಪ್ರಮುಖವಾಗಿ ಕಾರ್ಮಿಕರು ಹೊರಗೆ ಬಂದ ನಂತರದಲ್ಲೂ, ಅವರನ್ನು ಹೊರಗೆ ಹಾಕಿದ ನಂತರದಲ್ಲೂ, ಅದನ್ನು ಲಾಕೌಟ್ ಎಂದು ಘೋಷಣೆ ಮಾಡಿದ ನಂತರದಲ್ಲೂ ಕೂಡ ವಿಶೇಷವಾಗಿ ಪಿಎಫ್‌ನಿಂದ ಕೊಡಬೇಕಾದಂತಹ ಹಣವನ್ನೂ ಕೂಡ 10-11 ವರ್ಷಗಳಿಂದಲೂ ಕೂಡ ಕೊಡದಿರುವಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅದಕ್ಕೆ ಟೈಮ್ ಲಿಮಿಟ್ ಬೇಕು. ಯಾವುದೇ ಒಂದು ಕಾರ್ಖಾನೆ ಅನಧಿಕೃತವಾಗಿ ಅಥವಾ ಅಧಿಕೃತವಾಗಿ ಮುಚ್ಚಿದ ನಂತರದಲ್ಲಿ ಅದಕ್ಕೆ ಒಂದು ಟೈಮ್ ಬೌಂಡ್ ಹಾಕಿ ಅವರಿಗೆ ಸಲ್ಲಬೇಕಾಗಿರುವಂತಹ ಸೌಲಭ್ಯಗಳು ಏನು ಇವೆ, ಅವನ್ನು ಕೊಡಿಸುವಂತಹ ವ್ಯವಸ್ಥೆಗಳು ಆಗಿಲ್ಲ. ಅದಕ್ಕೆ ಸರ್ಕಾರದಲ್ಲಿರುವಂತಹ ರೀತಿಯಲ್ಲಿ, ಕಾರ್ಖಾನೆ ಮುಚ್ಚಿದ ನಂತರದಲ್ಲಿ ಎಷ್ಟು ದಿನಗಳೊಳಗಾಗಿ ಇದನ್ನು ಸೆಟಲ್ ಮಾಡಬೇಕು ಎನ್ನುವಂತಹ ಅವಕಾಶ ಕಾನೂನಿನಲ್ಲಿ ಇದೆ? ಆ ಅವಕಾಶದ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳದಂತಹವರ ಮೇಲೆ ನೀವು ಯಾವ ರೀತಿ ಕ್ರಮವನ್ನು ಕೈಕೊಂಡಿದ್ದೀರಿ ಎಂದು ಕೇಳಲಿಕ್ಕೆ ನಾನು ಬಯಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಅನಧಿಕೃತವಾಗಿ ಬಂದ್ ಆಗುವಂತಹ ಕಾರ್ಖಾನೆಗಳು ವಿವಾದಕ್ಕೆ ಈಡಾಗುತ್ತವೆ. ಕಾರ್ಮಿಕರನ್ನು, ಆ ಕಾರ್ಖಾನೆಯ ಮಾಲೀಕರನ್ನು ಕರೆದು ಸಂಧಾನದ ಮೂಲಕವಾಗಿ ಇತ್ಯರ್ಥ ಮಾಡುವಂತಹದು ಕಾನೂನಿನಲ್ಲಿ ಅವಕಾಶ ಇರುವಂತಹದು. ಅದನ್ನು ಕಾನೂನಿನಂತೆ ತೀರ್ಮಾನ ಮಾಡುವಂತಹದು. ಅಧಿಕೃತವಾದಂತಹ ವಿಚಾರವಾಗಿ ಬಂದ್ ಮಾಡಿರುವಂತಹ ಕಾರ್ಖಾನೆ ಎಂದು ಹೇಳಿದರೆ ಕಾರ್ಮಿಕರ ಮತ್ತು ಕಾರ್ಖಾನೆಯ ಮಾಲೀಕರ ಮಧ್ಯೆ ಸಂಧಾನವಾಗಿ ಕಾರ್ಖಾನೆಯನ್ನು ಮುಚ್ಚುತ್ತೇವೆ ಎನ್ನುವಂತಹ ತೀರ್ಮಾನಕ್ಕೆ ಬಂದಾಗ ಕಾರ್ಮಿಕರಿಗೆ ಪಾವತಿ ಆಗಬೇಕಾದಂತಹ ಅವರಿಗೆ ಸಿಗಬೇಕಾದ ಎಲ್ಲಾ ಸವಲತ್ತುಗಳನ್ನು ಪಡೆದ ನಂತರವೇ ಮುಚ್ಚುವಂತಹದು ಕಾನೂನಿನಲ್ಲಿ ಅವಕಾಶ ಇರುವಂತಹದು. ಅಂತಹ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ 20-23 ಕಾರ್ಖಾನೆಗಳು ಬಂದ್ ಆಗಿವೆ ಎಂದು ಹೇಳಿ ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ. ಅವರು ಪೂರ್ಣ ವಿವರ ಕೊಟ್ಟಾಗ ಪ್ರಾಯಶಃ ಇತರೆ ಕಾರ್ಖಾನೆಯ ಮಾಲೀಕರ ಜೊತೆ ಅವರ ವಿಚಾರ ಏನಾಗಿದೆ? ಹೇಗೆ ನಡೆದಿದೆ? ಕಾರ್ಖಾನೆ ಮುಚ್ಚುವುದಕ್ಕೆ ಕಾರಣ ಏನು ಇದೆ ಎಂಬ ವಿವರವಾದ ಮಾಹಿತಿ ಒದಗಿಸಿಕೊಡುವುದಕ್ಕೆ ಸಾಧ್ಯ.

ಅಧ್ಯಕ್ಷರು:- ಮಾನ್ಯ ಗುರುಸ್ವಾಮಿಯವರು ಐಎಲ್‌ಓ ಬಗ್ಗೆ ಕೇಳಿದರಲ್ಲಾ, ಆ ಬಗ್ಗೆ ಅವರಿಗೆ ಮಾಹಿತಿ ತರಿಸಿಕೊಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಐಎಲ್‌ಓ ಆರ್ ಬಗ್ಗೆ ಮಾಹಿತಿ ತಕ್ಷಣ ನನ್ನ ಹತ್ತಿರ ಇಲ್ಲ, ಮಾಹಿತಿ ತರಿಸಿ ಕಳುಹಿಸಿಕೊಡುತ್ತೇನೆ.

ಶ್ರೀ ಎ. ರಾಮದಾಸ್:- ಇಷ್ಟು ದಿವಸದೊಳಗೆ ಎಂದು ತಾವು ದಿನಾಂಕವನ್ನು ಹೇಳಲಿಲ್ಲ. ಅನಧಿಕೃತವಾಗಿ ಕಾರ್ಖಾನೆಗಳನ್ನು ಕ್ಲೋಸ್ ಮಾಡಿದ್ದಾರೆ. ಯಾವ ದಿನಾಂಕದೊಳಗೆ ಸರ್ಕಾರ ಅವರ ಮೇಲೆ ಕ್ರಮ ಕೈಗೊಂಡು ಲೇಬರರ್ಸ್‌ಗೆ ಏನು ಪರಿಹಾರ ಕೊಡಬೇಕು ಎನ್ನುವುದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಸಿ.ಆರ್. ಸಗೀರ್ ಅಹಮದ್:- ನಾನೇನು ಹೇಳಿದೆ ಎಂದರೆ, ಎರಡು ವಿಚಾರ ಇಲ್ಲಿದೆ. ಅಧಿಕೃತ ಮತ್ತು ಅನಧಿಕೃತ. ಅಧಿಕೃತವಾಗಿ ಕಾರ್ಖಾನೆಗಳು ಬಂದ್ ಆಗುವಂತಹದು ಎಂದು ಹೇಳಿದರೆ ಕಾರ್ಮಿಕರು ಮತ್ತು ಮಾಲೀಕರ ಮಧ್ಯೆ ಸಂಧಾನದ ಮೂಲಕವಾಗಿ ಅವನಿಗೆ ಸಿಗಬೇಕಾದಂತಹ ಪರಿಹಾರಕ್ಕೆ ಒಪ್ಪಂದ ಆದಾಗ ಆ ವಿಚಾರ ಪ್ರಸ್ತಾಪ ಆಗುವುದಿಲ್ಲ. ಅವರ ಮಧ್ಯೆ ತೀರ್ಮಾನ ಆದಂತಹದು, ಸಂಪೂರ್ಣವಾಗಿ ಇತ್ಯರ್ಥ ಆಗುತ್ತದೆ. ಅನಧಿಕೃತವಾಗಿ ಬಂದ್ ಆಗುವಂತಹ ಕಾರ್ಖಾನೆಗೆ ಕಾನೂನಿನಲ್ಲಿ ಅವಕಾಶ ಇದ್ದು ನನಗೆ ತಿಳುವಳಿಕೆ ಇದ್ದಹಾಗೆ 60 ದಿನಗಳೊಳಗಾಗಿ ತೀರ್ಮಾನ ಮಾಡಬೇಕಾದಂತಹದು ಇಲಾಖೆಯ ಜವಾಬ್ದಾರಿ. ಯಾವಾಗ ಸಂಧಾನಕ್ಕೆ ಕರೆಯುವಂತಹ ಸಂದರ್ಭಕ್ಕೆ ಇಲಾಖೆ ನೋಟೀಸ್ ನೀಡುತ್ತದೋ ಆ ಸಂದರ್ಭದಲ್ಲಿ ಬರದೇ ಇದ್ದಾಗ, ಅದು ಕಾರ್ಮಿಕ ಸಂಘಟನೆಗಳು ಇರಬಹುದು, ಅಥವಾ ಕಾರ್ಖಾನೆಯ ಮಾಲೀಕರು ಇರಬಹುದು; ಅವರು ಯಾವಾಗ ಸಂಧಾನಕ್ಕೆ ಬರುವುದಕ್ಕೆ ತಯಾರು ಇರುವುದಿಲ್ಲವೋ ಅದರಿಂದ ವಿಚಾರಗಳು ಮುಂದೆ ಹೋಗುವಂತಹದು ತಮಗೆ ಗೊತ್ತಿದೆ. ಕೆಲವೊಮ್ಮೆ ನಮ್ಮ ಕಾರ್ಮಿಕ ಇಲಾಖೆಗೆ ಬರದೇ ಇರುವಂತಹ ಪ್ರಕರಣಗಳೆಲ್ಲಾ ಕಾರ್ಮಿಕ ನ್ಯಾಯಾಲಯಕ್ಕೇ ನೇರವಾಗಿ ಹೋಗಿರುವಂತಹದು ನಿಮಗೆ ಗೊತ್ತಿದೆ. ಅದರಿಂದ 60 ದಿನಗಳೊಳಗಾಗಿ ಇತ್ಯರ್ಥ ಆಗಬೇಕು. ಇಂತಹ ಪ್ರಕರಣಗಳಲ್ಲಿ ಆಗದೇ ಇರುವಂತಹ ಸಂದರ್ಭ ಕಾನೂನಿನ ಅನ್ವಯ ಕೆಲವರು ನ್ಯಾಯಾಲಯಕ್ಕೆ ಹೋಗುತ್ತಾರೆ. ಕೆಲವರು ಸಂಧಾನಕ್ಕೆ ನಮ್ಮ ಇಲಾಖೆಯ ಮುಖಾಂತರ ಬರುವಂತಹ ಅವಕಾಶ ಇದೆ. ಅಂತಹ ಪ್ರಕರಣಗಳಲ್ಲಿ 60 ದಿವಸಗಳೊಳಗಾಗಿ ಇದು ಇತ್ಯರ್ಥ ಆಗಬೇಕಾಗುವಂತಹದಕ್ಕೆ ಕಾನೂನಿನಲ್ಲಿ ಅವಕಾಶ ಇದೆ.

ಅಧ್ಯಕ್ಷರು:- ಐಎಲ್‌ಓದು ನಿಮಗೆ ಕಾಪಿ ಕಳುಹಿಸಿಕೊಡುತ್ತಾರೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮೂರು ನಾಲ್ಕು ಪ್ರಕರಣಗಳಲ್ಲಿ ನನಗೆ ಗೊತ್ತಿರುವ ಹಾಗೆ ಡಿಪಾರ್ಟ್‌ಮೆಂಟ್‌ನವರು ಕನ್ಸಿಲಿಯೇಷನ್‌ಗೆ ರೆಫರ್ ಮಾಡಿಲ್ಲ. ಇದರಿದ ಲೇಬರರ್ಸ್ ಸಫರ್ ಆಗುತ್ತಿದ್ದಾರೆ. ಅವು ಯಾವುವು ಎಂದು ಸಭೆಗೆ ದಯಮಾಡಿ ತಿಳಿಸುತ್ತೀರಾ ಎಂಬುದು ಒಂದು. ಎರಡನೆಯದು ಮಾನ್ಯ ಮಿತ್ರರಾದ ಶ್ರೀ ರಾಮದಾಸ್ ಅವರು ಏನು ಹೇಳಿದರಲ್ಲಾ 30-40 ಕಾರ್ಖಾನೆಗಳು ಮುಚ್ಚಿವೆ ಎಂದು, ಇವೆಲ್ಲವೂ ನನ್ನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬರುವಂತಹವು. ನಮ್ಮ ಮೈಸೂರು ನಗರದ ಸುತ್ತ ಬರುತ್ತವೆ. ಎಲ್ಲಾ ಫ್ಯಾಕ್ಟರಿ ಕಾನ್‌ಸೆಂಟ್ರೇಟ್ ಆಗಿರುವುದೂ ನನ್ನ ಕ್ಷೇತ್ರದಲ್ಲೇ. ಕಾರ್ಖಾನೆಗಳು ಮುಚ್ಚಿರುವುದೂ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಅಂದರೂ ನನ್ನಲ್ಲೇ. ಆದರೂ ಕೂಡ ಕಾರ್ಖಾನೆಗಳು ಮುಚ್ಚಿರತಕ್ಕ ಸನ್ನಿವೇಶವನ್ನು ನೋಡಿದರೆ

ಸರ್ಕಾರ ಇವುಗಳಿಗೆ ಪುನರ್ ಜನ್ಮ ಕೊಡಲಿಕ್ಕೆ ಏನೂ ಆಟೆಂಪ್ಟ್ ಮಾಡಿಲ್ಲವೇನೋ ಎಂದು ನನಗೆ ಅನೇಕ ಸಲ ಭಾಸವಾಗುತ್ತದೆ. ಇದರ ಬಗ್ಗೆ ತಾವು ಒಂದು ಟೈಮ್ ಲಿಮಿಟ್ ಹಾಕಿ ಯಾವಾಗ ಇದನ್ನೆಲ್ಲಾ ರೀ ಓಪನ್ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೀರಿ ಎನ್ನತಕ್ಕ ಭರವಸೆಯನ್ನು ಸರ್ಕಾರದಿಂದ ಪಡೆಯಲು ಅಪೇಕ್ಷೆ ಪಡುತ್ತೇನೆ.

ಶ್ರೀ ಪಿ.ಆರ್. ಸಗೀರ್ ಅಹಮದ್:- ಮಾನ್ಯ ಸಭಾಧ್ಯಕ್ಷರೆ, ಮೈಸೂರು ಜಿಲ್ಲೆಗೆ ಈಗ ಸೀಮಿತವಾದ ವಿಚಾರದಲ್ಲಿ ಐದು ಕಾರ್ಖಾನೆಗಳ ಸ್ಥಿತಿಗತಿ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಮಾನ್ಯ ಗೌರವಾನ್ವಿತ ಸದಸ್ಯರಾದಂತಹ ರಾಮದಾಸ್ ಅವರು ಹಾಗೂ ಮಾನ್ಯ ಗುರುಸ್ವಾಮಿಯವರು ಕೇಳುವಂತಹ ಪ್ರಶ್ನೆಗೆ ಪ್ರತ್ಯೇಕವಾಗಿ ಮೈಸೂರು ಜಿಲ್ಲೆಯಲ್ಲಿ ಇತರ 20 ರಿಂದ 23 ಕಾರ್ಖಾನೆಗಳು ಬಂದಾಗಿವೆ, ಎಂದು ಪ್ರಸ್ತಾಪಿಸಿದ್ದಾರೆ. ತಕ್ಷಣವೇ ನನ್ನ ಹತ್ತಿರ ಮಾಹಿತಿ ಇಲ್ಲ. ಆ ಮಾಹಿತಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.

ರಾಜ್ಯದಲ್ಲಿ ಚಿನ್ನ-ಬೆಳ್ಳಿ ಕೆಲಸಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಬಗ್ಗೆ

149 (1835) ಶ್ರೀ ಪುಟ್ಟರಂಗನಾಥ ಎಸ್.ಹೆಚ್(ಬೇಲೂರು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಚಿನ್ನ ಬೆಳ್ಳಿ ಕೆಲಸಗಾರರು ಕೆಲಸವಿಲ್ಲದೆ ಜೀವನ ನಿರ್ವಹಿಸಲು ತೊಂದರೆಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಖಮರುಲ್ ಇಸ್ಲಾಂ(ಕಾರ್ಮಿಕ ಸಚಿವರು):

ಅ) ಚಿನ್ನ, ಬೆಳ್ಳಿ ಕೆಲಸಗಾರರು ಜೀವನ ನಿರ್ವಹಿಸಲು ತೊಂದರೆಯಾಗಿ ಆತ್ಮಹತ್ಯೆಗೊಳಗಾಗಿರುವ ಸುದ್ದಿ, ಮಾಧ್ಯಮದಲ್ಲಿ ಬಂದಿರುವುದು ಗಮನಕ್ಕೆ ಬಂದಿದೆ.

ಆ) ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಹಿತರಕ್ಷಣೆ ಕಾಪಾಡಲು ವಿವಿಧ ಕಾಯ್ದೆಗಳಡಿ ಇವರಿಗೆ ಕನಿಷ್ಟ ವೇತನ, ರಜೆ, ವೈದ್ಯಕೀಯ ಸೌಲಭ್ಯ ಕೆಲಸದ ಸಮಯ, ಇತ್ಯಾದಿ ಸವಲತ್ತುಗಳು ಸಿಗುವಂತೆ ಮಾಡುವುದು ಕಾರ್ಮಿಕ ಇಲಾಖೆಯ ಜವಾಬ್ದಾರಿಯಾಗಿದೆ. ಆದರೆ ಕೆಲಸವಿಲ್ಲದೆ ಅಸಂಘಟಿತ ಕಾರ್ಮಿಕರಿಗೆ ಪರ್ಯಾಯ ವ್ಯವಸ್ಥೆ ಮಾಡುವ ವಿಷಯವು ಈ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್:- ಸ್ವಾಮಿ, ಆತ್ಮಹತ್ಯೆಗೊಳಗಾಗಿರುವ ಸುದ್ದಿ, ಮಾಧ್ಯಮದಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇದಕ್ಕೆ ಏನಾದರೂ ಪರ್ಯಾಯ ವ್ಯವಸ್ಥೆಯನ್ನು ಅವರಿಗೆ ಕಲ್ಪಿಸಿಕೊಡುವುದಕ್ಕೆ ಸಾಧ್ಯವೇ ಎಂದು ತಾವು ದಯಮಾಡಿ ಹೇಳಬೇಕು.

ಶ್ರೀ ಪಿ.ಆರ್. ಸಗೀರ್ ಅಹಮದ್(ಪ್ರಭಾರ ಸಚಿವರು) ಕಾರ್ಮಿಕ ಸಚಿವರ ಪರವಾಗಿ:- ಈಗ ಚಿನ್ನ, ಬೆಳ್ಳಿ ಕೆಲಸ ಮಾಡುವಂತಹ ಕೆಲಸಗಾರರಿಗೆ ಯಾವುದೇ ಸಂಘಟಿತ ಸಂಸ್ಥೆಗಳು ಇಲ್ಲ. ಅವರು ಪ್ರತ್ಯೇಕವಾಗಿ ಅವರವರ ಕೆಲಸದ ಮೇಲೆ ಅವಲಂಬಿತರಾಗಿದ್ದಾರೆ. ಈ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವ ವಿಚಾರವನ್ನು ಕೇವಲ ಪತ್ರಿಕೆಗಳಲ್ಲಿ ನಾವು ಓದಿದ್ದೇವೆ. ಸರ್ಕಾರಕ್ಕೆ, ಅದು ಪೊಲೀಸ್ ಇಲಾಖೆ ಆಗಲಿ, ಕಂದಾಯ ಇಲಾಖೆ ಆಗಲಿ ಕಾರ್ಮಿಕ ಇಲಾಖೆ ಆಗಲಿ ಇಲ್ಲಿಯವರೆಗೆ ಯಾವುದೇ ದೂರು ಬಂದಿಲ್ಲ. ಅಂತಹ ಪ್ರಕರಣಗಳ ಬಗ್ಗೆ ಯಾವುದೇ ಇಲಾಖೆಯಲ್ಲಿ